ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ
Chilume Circulated in and around 10 countries

ಸಂಪುಟ ೩, ಸಂಚಿಕೆ ೮, ಜನವರಿ ೨೦೧೮

Find us on: facebook®

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೧
ಬೆಂಗಳೂರು ಸುದ್ದಿ ... ಪು. ೨

ಚಿಲುಮೆಯ ಒಳಗೆ

ಆಹಾರ-ಆರೋಗ್ಯ ... ಪು. ೬
ವಿಚಾರ-ವಿಹಾರ ... ಪು. ೮

ಚಿಲುಮೆಯ ಒಳಗೆ

ಕಥಾಚಿಲುಮೆ ... ಪು. ೧೦
ರೆಸಿಪಿ ಕೊಡ್ತೀರಾ! ... ಪು. ೧೦

ಚಿಲುಮೆಯ ಒಳಗೆ

ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೧೧
ಪದ ಪುಂಜ/ರಂಗೋಲಿ ... ಪು. ೧೨

ಚಿಲುಮೆಯ ಒಳಗೆ

ಶಾಯರಿ ... ಪು. ೧೩
ವಿಜ್ಞಾನ , ಅಲ್ಲಲ್ಲಿ ಏನೇನು ... ಪು. ೧೫

ಅಸಾದುಲ್ಲ ಬೇಗ್ - ಶಾಯರಿ
ಪುಟ ೧೩

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ಓದುಗರೆಲ್ಲರಿಗೂ ಕ್ರಿ.ಶ. ೨೦೧೬ ರ ವರ್ಷದಲ್ಲಿ ಲೋಕಹಿತವಾದ ಸಂತೃಪ್ತಿಯ ಜೊತೆಯಲ್ಲಿ, ನಮ್ಮ ನುಡಿಯಾದ ಕನ್ನಡದ ಬಗ್ಗೆಯೂ ಹೆಚ್ಚು ಹೆಚ್ಚು ಅಕ್ಕರೆಯು ಮೂಡಿ ಬರಲಿ ಎಂದು ಆಶಿಸುತ್ತ, ಹೊರನಾಡ ಚಿಲುಮೆಯ ಜನವರಿ ಸಂಚಿಕೆಯನ್ನು ನಿಮ್ಮ ಓದಿಗೆ ಅರ್ಪಿಸುತ್ತಿದ್ದೀವಿ.

ಈ ಆಕ್ಕರೆಯ ಆಶಯದ ಹಿಂದೆ ಒಂದು ಕಳಕಳಿಯೂ ಇದೆ. ಚಿಲುಮೆಯ ಹಲವಾರು ಸಂಪಾದಕೀಯದಲ್ಲಿ ಕನ್ನಡದ ನುಡಿ, ನಡೆಯ ಬಗ್ಗೆ ವಿವಿಧ ರೀತಿಯ ಅನೇಕ ವಿನಂತಿಗಳನ್ನು ಮಾಡಿದ್ದೇವೆ. ಇದು ನಿರಂತರವಾಗಿ ಮುಂದೆಯೂ ಈ ಪತ್ರಿಕೆಯ ಉಸಿರಿನಂತೆ ಪ್ರಕಟಗೊಳ್ಳುತ್ತಲಿರುತ್ತದೆ. ಕಳೆದ ಸಂಚಿಕೆಯಲ್ಲಿ ಹೇಳಿದ ಒಂದು ನಮ್ರ ಮನವಿಯು "ನೀವಿನ್ನೂ ಕನ್ನಡದಲ್ಲಿ ವ್ಯವಹರಿಸದೇ ಇರುವಿರಾದರೆ, ಬರುವ ವರುಷದಿಂದ ಕನ್ನಡದಲ್ಲಿ ವ್ಯವಹರಿಸಲು ಶುರುಮಾಡಿ" ಎಂಬುದು. ಈ ಒಂದು ಕರೆಗೆ ನೀವು ಓಗೊಟ್ಟಿರುವಿರಾದರೆ, ಬಹಳ ಸಂತೋಷ. ಒಂದು ವೇಳೆ, ಹೇಗೆ ಅದನ್ನು ಕಾರ್ಯಗತ ಮಾಡುವುದು ಎನ್ನುವುದು ನಿಮ್ಮ ಯೋಚನೆಯಾದರೆ, ನಿಮ್ಮ ಸುತ್ತಮುತ್ತಲಿರುವ, ಕನ್ನಡವನ್ನು ದಿನನಿತ್ಯದಲ್ಲಿ ಬಳಸುವ ಕನ್ನಡಿಗರು, ನಿಮಗೆ ಸ್ಫೂರ್ತಿಯಾಗಲಿ ಎಂದು ಆಶಿಸುತ್ತೇವೆ. ಹೊರನಾಡ ಚಿಲುಮೆಯ ಬಳಗದಿಂದ ಬರುವ ಸಂಚಿಕೆಗಳಲ್ಲಿ "ಕನ್ನಡವನ್ನು ಮೊಬೈಲ್ ನಲ್ಲಿ ಟೈಪ್ ಮಾಡುವುದು ಹೇಗೆ", "ಕನ್ನಡ ಹಾಡುಗಳನ್ನು ಹುಡುಕುವುದು ಹೇಗೆ", "ಕನ್ನಡದ ಕಥೆ ಪುಸ್ತಕವನ್ನು ಅಂತರ್ಜಾಲದಲ್ಲಿ ಹುಡುಕುವುದು ಹೇಗೆ" ಇತ್ಯಾದಿ ಪ್ರಶ್ನೆಗಳಿಗೆ ಒಂದಷ್ಟು ಅಂಕಣಗಳು ಹರಿದುಬರಲಿದೆ.

ಈ ವರ್ಷದಲ್ಲಿ ಇನ್ನೂ ಅನೇಕ ಬರಹಗಾರರು ಓದುಗರ ಸಾಹಿತ್ಯದ ಹಸಿವನ್ನು ನೀಗಿಸುವರು ಎನ್ನುವ ಭರವಸೆ ನಮ್ಮದು. ವಿವಿಧ ರೀತಿಯ ಹೊಸ ವಿಚಾರಗಳ ಬರಹಗಳೂ ಪ್ರಕಟಪಡಿಸುವ ಹಂಬಲ ನಮ್ಮದು. ಇವೆಲ್ಲವೂ ಓದುಗರಾದ ನಿಮ್ಮ ಪ್ರೋತ್ಸಾಹದಿಂದ ಮಾತ್ರ ಸಾಧ್ಯ.

ಇದು ಸುಗ್ಗಿಯ ಹಬ್ಬದ ಸಮಯ. ಆಸ್ಟ್ರೇಲಿಯಾದಲ್ಲಿ ಬಿರು ಬೇಸಿಗೆಯಾದರೆ, ಭಾರತದಲ್ಲಿ ಛಳಿಯ ಕೊರೆತವು ಶಂಖದಷ್ಟಾದರೂ ಕಡಿಮೆಯಾಗುತ್ತಿದೆ ಎನಿಸುವ ಮಕರಸಂಕ್ರಮಣದ ಕಾಲ. ಭೂತಾಯಿಯು ಕೊಟ್ಟ ಫಲವನ್ನು ಒಪ್ಪಗೊಳಿಸಿದ ಕಣದಲ್ಲಿಟ್ಟು ಅರ್ಪಿಸಿ ಸ್ವೀಕರಿಸುವಂತೆ, ನಮ್ಮನಮ್ಮ ಮನಗಳನ್ನು ಹಸನುಮಾಡಿಕೊಳ್ಳುತ್ತ, ನಮ್ಮನ್ನು ಲೋಕಹಿತಕ್ಕೆ ಸಮರ್ಪಿಸಿಕೊಳ್ಳೋಣ. ನಮ್ಮ ನಿಮ್ಮಿಂದಲೇ ಸಂಕ್ರಮಣವು ಶುರುವಾಗಿ ಸಂಕ್ರಾಂತಿಯು ಮೂಡಲಿ. ಸಕ್ಕರೆಯ ಅಚ್ಚಿನ ಸವಿಯಲ್ಲೂ ಕನ್ನಡದ ಸವಿಯನ್ನು ಕಾಣೋಣ. ▪

ಎರಡು ತಿಂಗಳ ಪ್ರಮುಖ ದಿನಗಳು

ಜನವರಿ, ಶ್ರೀ ಮನ್ಮಥ ನಾಮ ಸಂವತ್ಸರ, ದಕ್ಷಿಣಾಯನ/ಉತ್ತರಾಯಣ, ಹೇಮಂತ ಋತು, ಮಾರ್ಗಶಿರ/ಪುಷ್ಯ ಮಾಸ

01 ಗು - ಆಂಗ್ಲವರ್ಷಾರಂಭ
05 ಮಂ - ಸಫಲಾ ಏಕಾದಶಿ
09 ಶ - ಅನಿವಾಸಿ ಭಾರತೀಯರ ದಿನ
9/10 - ಅಮಾವಾಸ್ಯೆ 11 ಸೊ – ಪುಷ್ಯ ಮಾಸ ಆರಂಭ
15 ಶು - ಮಕರ ಸಂಕ್ರಾಂತಿ/ಉತ್ತರಾಯಣ ಕಾಲ ಆರಂಭ
20 ಬು - ಪುತ್ರದಾ ಏಕಾದಶಿ 23 ಶ - ನೇತಾಜಿ ಜನ್ಮದಿನ
23/24 - ಬನದ ಹುಣ್ಣಿಮೆ
26 ಮಂ - ಭಾರತ ಗಣರಾಜ್ಯ ದಿನ
27 ಬು - ಸಂಕಷ್ಟ ಚತುರ್ಥಿ 28 ಶು – ತ್ಯಾಗರಾಜ ಆರಾಧನೆ

ಫೆಬ್ರವರಿ ಶ್ರೀ ಮನ್ಮಥ ನಾಮ ಸಂವತ್ಸರ, ಉತ್ತರಾಯಣ, ಹೇಮಂತ/ಶಿಶಿರ, ಪುಷ್ಯ/ಮಾಘ ಮಾಸ

02 ಮಂ – ಪಂಚಾಕ್ಷರಿ ಗವಾಯಿ ಜಯಂತಿ
04 ಗು – ಷಟ್ ತಿಲ ಏಕಾದಶಿ,ವಿಶ್ವ ಕ್ಯಾನ್ಸರ್ ದಿನ
08 ಸೋ – ಅವರಾತ್ರಿ ತೈ ಅಮಾವಾಸ್ಯೆ
08 ಸೋ - ಪುರಂದರ ಪುಣ್ಯದಿನ/ಗರುಡ ಜಯಂತಿ
13 ಶ – ವಿಶ್ವ ರೇಡಿಯೋ ದಿನ
14 ಭಾ - ವ್ಯಾಲೆಂಟೈನ್ಸ್ ಡೇ
16 ಮಂ – ಮಧ್ವನವಮಿ 18 ಗು – ಜಯ/ಭೀಷ್ಮ ಏಕಾದಶಿ
19 ಶು - ಶಿವಾಜಿ/ವಾದಿರಾಜ ಜಯಂತಿ 22 ಸೊ – ಭಾರತ/ವ್ಯಾಸ ಹುಣ್ಣಿಮೆ
26 ಶು - ಸಂಕಷ್ಟ ಚತುರ್ಥಿ 28 ಭಾ - ರಾಷ್ಟ್ರೀಯ ವಿಜ್ಞಾನ ದಿನ

ದಿನಕರ ದೇಸಾಯಿಯವರ ನೆನಪಿಗಾಗಿ ಅಕಾಡೆಮಿ ಆಫ್ ಹ್ಯೂಮರ್ ಸಂಸ್ಥೆಯು ಶುಕ್ರವಾರ 25.12.2015ರಂದು ಜಯನಗರದ ಎಚ್. ಎನ್ ಕಲಾಕ್ಷೇತ್ರದಲ್ಲಿ ಹಾಸ್ಯೋತ್ಸವವನ್ನು ಆಯೋಜಿಸಿತ್ತು. ಅಲ್ಲಿಗೆ ಹೋದವರಿಗೆ ಹಾಸ್ಯ ಸಂತರ್ಪಣೆಯ ಜೊತೆಗೆ ಚುಟುಕಗಳ ಸಂತರ್ಪಣೆಯೂ ದೊರಕಿತು. ಆ ಸಂದರ್ಭದಲ್ಲಿ ಬರೆದ ಬರಹವಿದು. (ಸಮಾರಂಭದ ಛಾಯಾ ಚಿತ್ರವು ಲೇಖನದ ಮುಂದಿನ ಪುಟಗಳಲ್ಲಿದೆ)

ಅದೊಂದು ಕಾಲವಿತ್ತು. ಪತ್ರಿಕೆ ಬಂದೊಡನೇ ಜನ ಕಣ್ಣಾಡಿಸುತ್ತಿದ್ದುದು ದಿನಕರ ದೇಸಾಯಿಯವರ ನಾಲ್ಕೇ ಸಾಲಿನ ಚುಟುಕದ ಕಡೆಗೆ. ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಮುಂತಾದ ವಿಷಯಗಳ ಬಗೆಗೆ ಅವರಿಗೆ ಅನಿಸಿದ ಅಭಿಪ್ರಾಯಗಳನ್ನು ಖಂಡತುಂಡವಾಗಿ ನಿರೂಪಿಸುತ್ತಿದ್ದವರು ದಿನಕರ ದೇಸಾಯಿಯವರು.

ಪ್ರೈಮರೀ ಶಾಲೆಯ ಮಾಸ್ತರರ ಮಗನಾಗಿ 1909ರಂದು ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಹೊಂಡಕ್ಕಲ್ ಗ್ರಾಮದಲ್ಲಿ ಜನಿಸಿದ ದೇಸಾಯಿಯವರು ಹುಟ್ಟಿದ್ದೂ ಬಡವರಾಗಿ ಮತ್ತು ಜೀವನ ಮುಗಿಸಿದ್ದೂ ಬಡವರಾಗಿಯೇ. ಚಿಕ್ಕಂದಿನಲ್ಲಿಯೇ ಅಮ್ಮನನ್ನು ಕಳೆದುಕೊಂಡ ಅವರಿಗೆ ತಾತನದೇ ಆಸರೆ. ತಂದೆಯವರು ಬಿಡುವಿನ ವೇಳೆಯಲ್ಲಿ ತೆಂಗಿನ ನಾರು ತಯಾರಿಸಿ ನಾಲ್ಕು ಕಾಸು ಸಂಪಾದನೆ ಮಾಡುತ್ತಿದ್ದರು. ಬಡತನವನ್ನು ಚಿಕ್ಕಂದಿನಿಂದಲೇ ಕಂಡಿದ್ದರಿಂದಲೋ ಏನೋ ದೇಸಾಯಿಯವರು ಒಬ್ಬ ಸಾಮಾಜಿಕ ಕಾರ್ಯಕರ್ತನಾಗಿ ರೂಪುಗೊಂಡರು. ಕನ್ನಡ ಎಂ.ಎ ಮುಗಿಸಿದ ಅವರು ಗೋಪಾಲಕೃಷ್ಣ ಗೋಖಲೆಯವರು ಸ್ಥಾಪನೆ ಮಾಡಿದ ಸರ್ವೆಂಟ್ಸ್ ಆಫ್ ಇಂಡಿಯನ್ ಸೊಸೈಟಿಯ ಸದಸ್ಯರಾದರು. ಆಗಿನ ಕಾಲಕ್ಕೆ ಸದಸ್ಯರಾಗುವವರು ನಾವು ಯಾವ ಪ್ರತಿಫಲವನ್ನೂ ನಿರೀಕ್ಷಿಸದೇ ತಾಯ್ನಾಡಿಗೆ ಸೇವೆ ಸಲ್ಲಿಸುತ್ತೇವೆ ಎಂದು ಪ್ರಮಾಣವಚನ ಸ್ವೀಕರಿಸಬೇಕಿತ್ತು.

ಹೀಗೆ ಪ್ರಾರಂಭವಾದ ಅವರ ಸಾಮಾಜಿಕ ಸೇವೆ ಮೊದಲಿಗೆ ಮುಂಬಯಿಯ ಹಡಗು ನೌಕರರ ಸ್ಥಿತಿಗತಿಗಳನ್ನು ಉತ್ತಮ ಪಡಿಸುವುದರಿಂದ ಪ್ರಾರಂಭವಾಗಿ ಅದು ಬಿಜಾಪುರ ಮತ್ತು ಧಾರವಾಡ ಜಿಲ್ಲೆಗಳಿಗೂ ವ್ಯಾಪಿಸಿತು. ಮುಂಬಯಿಯಲ್ಲಿ ನೆಲೆಸಿದ್ದ ಅವರು ಸುಮಾರು ಹನ್ನೆರಡು ವರ್ಷಗಳಷ್ಟು ಕಾಲ ಮುಂಬಯಿ ಕಾರ್ಪೋರೇಷನ್ನಿನ ಸದಸ್ಯರಾಗಿದ್ದರು ನಂತರ ಅವರು ಹುಟ್ಟೂರು ಉತ್ತರ ಕನ್ನಡ ಜಿಲ್ಲೆಗೆ ಬಂದು ತಮ್ಮ ಸಾಮಾಜಿಕ ಚಟುವಟಿಕೆಗಳನ್ನು ಪ್ರಾರಂಭಿಸಿದರು. ರೈತರ ಪರವಾಗಿ ಹೋರಾಟ ಮಾಡಿ ಉಳುವವನೇ ಭೂಮಿಯ ಒಡೆಯನನ್ನಾಗಿಸಿದರು. 1957ರಲ್ಲಿ ಕೆನರಾ ವೆಲ್‌ಫೇರ್ ಟ್ರಸ್ಟ್ ಪ್ರಾರಂಭಿಸಿ ಅದರ ಮುಖಾಂತರ ಅನೇಕ ಶಾಲಾ ಕಾಲೇಜುಗಳನ್ನೂ ಸ್ಥಾಪನೆ ಮಾಡಿದರು. ಇತ್ತೀಚೆಗೆ ಈ ಟ್ರಸ್ಟ್ ತನ್ನ 50ನೇ ವರ್ಷಾಚರಣೆ ಸಮಾರಂಭವನ್ನು ಆಚರಿಸಿಕೊಂಡಿತು. ಈಗ ಈ ಟ್ರಸ್ಟ್ ಸುಮಾರು ಒಟ್ಟು 18 ಕೇಂದ್ರಗಳಲ್ಲಿ 37 ಶಾಲೆಗಳನ್ನು ನಡೆಸುತ್ತಿದ್ದು ಅದರಲ್ಲಿ ಸುಮಾರು 10 ಸಾವಿರ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಅಂಕೋಲೆಯಲ್ಲಿ ಗೋಖಲೆ ಸೆಂಟಿನರಿ ಕಾಲೇಜು ಸ್ಥಾಪನೆ ಮಾಡಿದರು. ತಾಯ್ನಾಡಿಗೆ ಹೆಚ್ಚಿನ ಸೇವೆ ಸಲ್ಲಿಸಲು ನೆರವಾಗಲಿ ಎಂದು ಅವರು ಚುನಾವಣೆಗೆ ನಿಂತು ಗೆದ್ದು ಒಂದು ಅವಧಿಗೆ ಲೋಕಸಭೆ ಸದಸ್ಯರಾಗಿದ್ದರು. ಆದರೆ ಜನರ ಅಜ್ಞಾನ ಮತ್ತು ರಾಜಕೀಯ ಪಕ್ಷಗಳ ಕುತಂತ್ರಗಳಿಂದ ಅವರು ಮತ್ತೆ ಚುನಾಯಿತರಾಗಲೇ ಇಲ್ಲ. ಇವ್ಯಾವುದೂ ಅವರು ಸಾಮಾಜಿಕ ಸೇವೆಗೆ ತೊಡಕಾಗಲಿಲ್ಲ.

ದೇಸಾಯಿಯವರ ಬರವಣಿಗೆ ಪ್ರಾರಂಭವಾದದ್ದು ಅವರ ಇಪ್ಪತ್ತನೇ ವಯಸ್ಸಿನಲ್ಲಿ. ಮಾತೃಭಾಷೆಯಾದ ಕೊಂಕಣಿಯಲ್ಲಿ. ಬರೀ ಆಡುಭಾಷೆಯಾದ ಕೊಂಕಣಿ ಕನ್ನಡ ಲಿಪಿಯನ್ನೇ ಆಧರಿಸಿತ್ತು. ಕೊಂಕಣಿ ಕವಿತೆಗಳು ಉತ್ತರ ಕನ್ನಡದ ಜನರ ಮನಸ್ಸನ್ನು ಸೂರೆಗೊಂಡು ಅನೇಕ ಸಮಾರಂಭಗಳಲ್ಲಿ ದೇಸಾಯಿಯವರ ಕವಿತೆಗಳನ್ನು ಹಾಡುತ್ತಿದ್ದರು. ಇಷ್ಟಾದರೂ ಕೊಂಕಣಿ ಕವನ ಸಂಗ್ರಹ ತರುವ ಅವರ ಕನಸು ಕನಸಾಗಿಯೇ ಉಳಿದಿದ್ದು 1981ರಲ್ಲಿ ಅಂದ್ರೆ ಅವರ ಸಾವಿಗೆ ಕೇವಲ ಒಂದೇ ವರ್ಷ ಇರುವಾಗ ಪ್ರಕಟವಾಗಿತ್ತು.

ಪತ್ನಿ ಇಂದಿರಾ ಮತ್ತು ಹೆಣ್ಣು ಇಬ್ಬರು ಮಕ್ಕಳು ಉಷಾ ಪ್ರಧಾನ್ ಅವರು ಮುಂಬಯಿಯಲ್ಲಿದ್ದರೆ ಕಿರಿಯ ಮಗಳು ನಿಷಾ ವೆಂಗ್ಸರ್ಕಾರ್ ಬರೋಡಲ್ಲಿದಾರೆ. ದಿನಕರ ದೇಸಾಯಿಯವರು 6.11..1982ರಲ್ಲಿ ನಿಧನರಾದರೆ ಅವರ ಪತ್ನಿಯವರು 2002 ರಲ್ಲಿ ನಿಧನರಾದರು.

ಮೊದಲಿಗೆ ದೇಸಾಯಿಯವರು ಇನ್ನಿತರ ಕವಿಗಳಂತೆ ದೀರ್ಘ ಕವಿತೆಗಳನ್ನೇ ಬರೆದರು. ಅವರ ಪ್ರಥಮ ಕವನ ಸಂಕಲನ 1950ರಲ್ಲಿ ಪ್ರಕಟವಾಯಿತು. ನಂತರ 1955ರಲ್ಲಿ ಹೂ ಗೊಂಚಲು ಎನ್ನುವ ಇನ್ನೊಂದು ಸಂಕಲನವನ್ನೂ ಹೊರತಂದರು. ತರುಣರ ದಸರೆ – ಕಡಲ ಕನ್ನಡ – ದಾಸಾಳ , ಮಕ್ಕಳ ಗೀತೆಗಳು ನಂತರ ಪ್ರಕಟವಾದವು. ಈ ಸಂಗ್ರಹದ ಒಂದು ಕವಿತೆ ಟಿಕ್ ಟಿಕ್ ಗೆಳೆಯಾ ಟಿಕ್ ಟಿಕ್ ಇಂದೂ ಜನಪ್ರಿಯವಾಗಿದೆ. ಪ್ರವಾಸ ಸಾಹಿತ್ಯದಲ್ಲೂ ಕೈಯಾಡಿಸಿರುವ ದೇಸಾಯಿಯವರು ನಾ ಕಂಡ ಪಡುವಣ ಕೃತಿ ರಚಿಸಿದ್ದಾರೆ. ಕವನದ ಇನ್ನಿತರ ಪ್ರಾಕಾರಗಳಲ್ಲಿ ಆಸಕ್ತಿ ತಳೆದ ದೇಸಾಯಿಯವರು ಮೊದಲಿಗೆ ನಾಲ್ಕೇ ಸಾಲಿನ ಚುಟುಕಗಳನ್ನು ಬರೆದರು. ಅಂಕೋಲದಿಂದ ಜನಸೇವಕ ಎನ್ನುವ ಪತ್ರಿಕೆ ಪ್ರಾರಂಭಿಸಿದ ಜನಸೇವಕ ಪತ್ರಿಕೆಯಲ್ಲಿ ಚುಟುಕಗಳು ಪ್ರಕಟವಾದಾಗ ಅವು ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದು ಸಂಚಲನವನ್ನೇ ಉಂಟುಮಾಡಿದ್ದವು. ಜನಸೇವಕ ಪತ್ರಿಕೆಗೆ ಅನೇಕ ಹಿರಿಯರು ಬರೆಯುತ್ತಿದ್ದರು. ಅವರಲ್ಲಿ ಪ್ರಮುಖರು ಗೌರೀಶ ಕಾಯ್ಕಿಣಿಯವರು .

ಮುಂದಿನ ಪುಟ ನೋಡಿ ...

ದಿನಕರ ದೇಸಾಯಿಯವರು ಒಟ್ಟು 12 ಕೃತಿಗಳನ್ನು ರಚಿಸಿದ್ದಾರೆ. ಅವರ ದಿನಕರನ ಚೌಪದಿ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಅವರ ಚೌಪದಿಗಳಲ್ಲಿ ನವರಸಗಳೂ ಬೆರೆತಿರುತ್ತಿದ್ದವು. ಹಾಗೆ ನೋಡಿದರೆ ಬಂಡಾಯ ಪರಂಪರೆ ಆರಂಭವಾಗುವ ಮೊದಲೇ ದೇಸಾಯಿಯವರು 1931ರಲ್ಲಿ ಬಾಡೋಲಿ ಸತ್ಯಾಗ್ರಹದ ಬಗೆಗೆ ಚುಟುಕು ಪದ್ಯಗಳನ್ನು ರಚಿಸಿದ್ದರು. ಈ ಚುಟುಕಗಳಿಂದಲೇ ಅವರು ಖ್ಯಾತರಾಗಿ ಅವರನ್ನು ಚುಟುಕ ಬ್ರಹ್ಮ ಎಂದೇ ಕರೆಯುತ್ತಿದ್ದರು. ಅವರ ಚುಟುಕದ ಸ್ವಾರಸ್ಯದ ಒಂದು ಉದಾಹರಣೆ ಎಂದರೆ ಅವರು ಹಾಲಕ್ಕಿ ಜನಾಂಗದ ಬಗೆಗೆ ಬರೆದ ಚುಟುಕ ದೀನ ದಲಿತರ ಬಗೆಗೆ ಇದ್ದ ಕಾಳಜಿಯನ್ನು ತೋರಿಸುತ್ತದೆ. ಆ ಚುಟುಕ ಹೀಗಿದೆ.

ಇವನ ಮನೆಯೊಳಗಿಲ್ಲ ಸಾಕಷ್ಟು ಅಕ್ಕಿ
ಆದರೂ ಈತನಿಗೆ ಹೆಸರು ಹಾಲಕ್ಕಿ
ಹಾಲು ಅಕ್ಕಿಗಳೆರಡೂ ಹೆಸರೊಳಗೆ ಮಾತ್ರ
ಹಸಿವೆಯೆಂಬುದು ಇವನ ಹಣೆಯ ಕುಲಗೋತ್ರ

ಮೊದಲಿಂದಲೂ ಬಹಳ ಸರಳ ಜೀವನಕ್ಕೆ ಒಗ್ಗಿಹೋಗಿದ್ದ ದೇಸಾಯಿಯವರು ಕಡೆಯತನಕವೂ ಅದನ್ನೇ ರೂಢಿಸಿಕೊಂಡಿದ್ದರು. ಅವರಿಗೆ 60 ವರ್ಷ ತುಂಬಿದಾಗ ಅವರ ಸ್ನೇಹಿತರೆಲ್ಲಾ ಸೇರಿ ಷಷ್ಟ್ಯಬ್ದ ಸಮಾರಂಭ ಏರ್ಪಾಡು ಮಾಡಿದರೆ ದೇಸಾಯಿಯವರು ಸಮಾರಂಭಕ್ಕೇ ಗೈರು ಹಾಜರಾಗಿ ಕಡೆಗೆ ಒಂದು ಚುಟುಕವನ್ನು ಬರೆದು ಕಳಿಸಿದರು.

ನನಗೇಕೆ ಷಷ್ಟ್ಯಬ್ದಿ ಸಾಕು ಬರವಣಿಗೆ
ಕವಿಗೆ ಬೇಕಾಗಿಲ್ಲ ಯಾವ ಮೆರವಣಿಗೆ
ಮೂಲೆಯಲಿ ಕುಳಿತು ಬರೆದರೆ ಒಂದು ಪದ್ಯ
ತಾಯ್ನುಡಿಗೆ ಅರ್ಪಿಸಿದ ಹಾಗೆ ನೈವೇದ್ಯ

ಅವರ ಕೆಲವು ಚುಟುಕಗಳ ವೈಖರಿಯನ್ನು ನೋಡೋಣ

ನಾ ಬರೆದ ಚುಟುಕಗಳ ಸಂಖ್ಯೆ ವಿಪರೀತ
ಶೇಕಡಾ ತೊಂಭತ್ತು ಹೊಡೆಯುವುವು ಗೋತ
ಉಳಿದ ಹತ್ತರ ಪೈಕಿ ಏಳೆಂಟು ಸತ್ತು
ಒಂದೆರಡು ಬದುಕಿದರೆ ಅವು ಮಾತ್ರ ಮುತ್ತು

ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ ಎನ್ನುವ ಹಾಗೆ ಪ್ರತಿಯೊಬ್ಬರೂ ತಾವು ಹುಟ್ಟಿದ ಊರಲ್ಲೇ ಮಣ್ಣಾಗಬೇಕು ಎನ್ನುವ ಬಯಕೆ ಇರುತ್ತದೆ. ಅದಕ್ಕೂ ಒಂದು ಚುಟುಕು ಹೀಗಿದೆ

ನಾನು ಹುಟ್ಟಿದ್ದು ಸಖಿ ಅಂಕೋಲೆಯಲ್ಲಿ
ಚಿಂತೆಯಿಲ್ಲದೇ ಸಾಯಬೇಕೆಂಬೆ ಅಲ್ಲಿ
ಅಂಕೋಲೆ ಎನ್ನುವುದು ಕನ್ನಡದ ಕಡಲು
ಈ ಕಡಲಿನೊಳಗಿರಲಿ ದಿನಕರನ ಒಡಲು

ಅವರ ಬಹಳಷ್ಟು ಚುಟುಕಗಳು ರಾಜಕೀಯ ವಿಡಂಬನೆಗೆ ಹೆಸರಾಗಿದ್ದವು. ಆಗಿನ ದಿನಗಳಲ್ಲಿ ಜನರು ಇವುಗಳನ್ನು ಹುಚ್ಚೆದ್ದು ಓದುತ್ತಿದ್ದರು. ಅಂದು ಬರೆದಿದ್ದ ರಾಜಕೀಯ ಚುಟುಕಗಳು ಇಂದಿಗೂ ಪ್ರಸ್ತುತವಾಗಿವೆ ಎಂದರೆ ಅಚ್ಚರಿ ಸಹಜ. ಬಹಶ: ಅವರು ಮುಂಬಯಿ ಕಾರ್ಪೊರೇಷನ್ನಿನ ಸದಸ್ಯರಾಗಿ, ಲೋಕಸಭಾ ಸದಸ್ಯರಾಗಿ ರಾಜಕೀಯವನ್ನು ಹತ್ತಿರದಿಂದ ಕಂಡಿದ್ದರಿಂದ ಅವರಲ್ಲಿ ಈ ಬಗೆಯ ಕ್ರಿಯಾತ್ಮಕತೆ ಬಂದಿರಬಹುದು. ಅಂಥಾ ಕೆಲವು ಚುಟುಕಗಳು ಹೀಗಿವೆ.

ಮುಂದಿನ ಪುಟ ನೋಡಿ ...

ರಾಜಕೀಯ ಪುಡಾರಿ

ಅಲಲಾ ಕೇಳೋ ಮಗನೇ ಪೌರುಷದ ಸುದ್ದಿ
ಎಷ್ಟು ಮಂದಿಗೆ ಉಂಟು ಈ ತರದ ಬುದ್ದಿ
ಹತ್ತು ವರುಷದ ಹಿಂದೆ ಇತ್ತು ಲಂಗೋಟಿ
ಈ ಹೊತ್ತು ನೋಡಿದರೆ ಬರೀ ಹತ್ತು ಕೋಟಿ

ಪಕ್ಷಗಳು

ಈ ಪಕ್ಷ ಆ ಪಕ್ಷ ಅಲ್ಲ ಒಂದೆರಡು
ಕೊನೆಗೆ ನೋಡಿದರೆ ಸಖಿ ಎಲ್ಲವೂ ಬರಡು
ಬಡವರಿಗೆ ತಪ್ಪಿಲ್ಲ ಉಪವಾಸ ತಾನೇ
ಇದಕೆನ್ನುವರು ರಾಜಕೀಯದ ಬೇನೆ

ಆಳುವ ಪಕ್ಷ

ಅದೃಷ್ಟಶಾಲಿ ಈ ಪಕ್ಷದ ಪುಢಾರಿ
ಕೆಸರು ಹತ್ತುವುದಿಲ್ಲ ಬಿದ್ದರೂ ಜಾರಿ
ಈತನಿಗೆ ಉಂಟು ಇನ್ನೊಂದು ಅನುಕೂಲ
ಸೋತುಹೋದರೆ ಆಗುವನು ರಾಜ್ಯಪಾಲ

ಈ ಚುನಾವಣೆ

ಈ ಚುನಾವಣೆಯೊಂದು ಭಾರೀ ವ್ಯಾಪಾರ
ಮಾರಲಿಕ್ಕೆ ತೆಗೆದಿಟ್ಟ ಸರಕು ಸರಕಾರ
ಯಾರು ಬೇಕಾದರೂ ಕೊಳ್ಳಬಹುದಂತೆ
ಐದು ವರುಷಕ್ಕೊಮ್ಮೆ ನಡೆಯುತ್ತದೆ ಸಂತೆ

ಬೆಂಗಳೂರಿನಲ್ಲಿ ನಡೆದ ದಿನಕರ ದೇಸಾಯಿಯವರ ನೆನಪಿನ ಕಾರ್ಯಕ್ರಮದಲ್ಲಿ ಬೇಲೂರು ರಾಮಮೂರ್ತಿಯವರು.

ದಿನಕರ ದೇಸಾಯಿಯವರು ನಮ್ಮ ದೇವರು, ಕವಿಗಳು ಮುಂತಾದವರ ಬಗೆಗೂ ತಮ್ಮ ಅನಿಸಿಕೆಗಳನ್ನು ಚುಟುಕಗಳ ಮುಖಾಂತರ ಪ್ರಸ್ತುತಪಡಿಸಿದ್ದಾರೆ ಅವುಗಳಲ್ಲಿ ಕೆಲವು.

ಗಣಪತಿಯ ಹೊಟ್ಟೆ

ಗಣಪತಿಯ ಹೊಟ್ಟೆ ಒಡೆಯಿತು ಬಹಳ ತಿಂದು
ಉದರಕಲ್ಕೆ ಸುತ್ತು ಹಾಕಿತು ಸರ್ಪ ಬಂದು
ಗುಣಹೊಂದಿದನು ಗಣಪ ಈ ಸುತ್ತಿನಿಂದ
ಘಟಸರ್ಪವೂ ಒಳಿತು ಮಾಡಬಹುದೆಂದ

ದೇವರ ಪೂಜೆ

ನಿತ್ಯವೂ ಉಂಟು ದೇವರ ಪೂಜೆ ಉದ್ದ
ನಡತೆ ನೋಡಿದರೆ ಯಾವುದೂ ಇಲ್ಲ ಶುದ್ಧ
ಪಾಪ ಪರಿಹಾರಕೆ ಬೇಕು ಈ ಪೂಜೆ
ಪುಣ್ಯವಂತರಿಗಿಲ್ಲ ದೇವರ ಮುಲಾಜೆ

ಮುಂದಿನ ಪುಟ ನೋಡಿ ...

ಆದಿಕವಿ ಪಂಪನಿಗೂ ಒಂದು ಚುಟುಕವನ್ನು ದೇಸಾಯಿಯವರು ಬರೆದಿದ್ದಾರೆ

ಜನ್ನಜನ್ಮಾಂತರಕೆ ಬನವಾಸಿ ನಾಡು
ನಂದನದಿ ಮರಿದುಂಬಿಯನ್ನಾಗಿ ಮಾಡು
ಎಂದು ಹಾಡಿದ ಆ ನಿನ್ನ ಹೃದಯದೊಲುಮೆ
ಇಂದಿಗೂ ನಮ್ಮ ನಾಡಿನ ಮಹಾ ಮಹಿಮೆ

ದೇಸಾಯಿಯವರ ಚುಟುಕಗಳು ಎಂದರೆ ಅವುಗಳ ವೈಖರಿಯೇ ಬೇರೆ. ಎಲ್ಲವುಗಳನ್ನೂ ಬರೆಯುತ್ತಾ ಹೋದರೆ ಪುಟಗಳೇ ಸಾಲದೇ ಹೋದೀತು. ನಮ್ಮ ಸಾಹಿತ್ಯ ಪರಂಪರೆಯಲ್ಲಿ ಒಬ್ಬ ಧೀಮಂತ ಬರಹಗಾರ ಎನಿಸಿಕೊಂಡಿದ್ದ ದೇಸಾಯಿಯವರದು ಒಂದು ಸಾರ್ಥಕ ಬದುಕು. ▪

ಹೊಸವರ್ಷಕ್ಕೊಂದು ಮಾಯಾಚೌಕ - (ಡಾ|| ಸಿ.ವಿ. ಮಧುಸೂದನ)

ಹೊಸ ವರ್ಷ 2016 ಅನ್ನು ಸ್ವಾಗತಿಸಲೆಂದೇ ಈ ಕೆಳಗಿನ 9 x 9 ಮಾಯಾ ಚೌಕವನ್ನು ರಚಿಸಲಾಗಿದೆ. ಇದರಲ್ಲಿ 184 ರಿಂದ 264 ವರೆಗಿನ ಪ್ರತಿಯೊಂದು ಸಂಖ್ಯೆಯನ್ನೂ ಉಪಯೋಗಿಸಲಾಗಿದೆ. ಈ ಚೌಕದ ಯಾವುದೇ ಅಡ್ಡ ಸಾಲಿನ (row) ಅಥವಾ ಕಂಬ ಸಾಲಿನ (column) ಅಥವಾ ಕರ್ಣ ಸಾಲಿನ (diagonal) ಮೊತ್ತ 2016 ಎಂದು ನೀವು ಖಚಿತ ಮಾಡಿ ಕೊಳ್ಳಬಹುದು. ನಿಮ್ಮ ಹೊಸ ವರ್ಷವೂ ಇದೇ ರೀತಿ ಎಲ್ಲ ಬಗೆಗಳಲ್ಲೂ ಸುಗಮವಾಗಿರಲಿ.

230	241	252	263	184	195	206	217	228
240	251	262	192	194	205	216	227	229
250	261	191	193	204	215	226	237	239
260	190	201	203	214	225	236	238	249
189	200	202	213	224	235	246	248	259
199	210	212	223	234	245	247	258	188
209	211	222	233	244	255	257	187	198
219	221	232	243	254	256	186	197	208
220	231	242	253	264	185	196	207	218

ತಾಂಬೂಲ

ರಾಜಿ ಜಯದೇವ್ (Accredited Practising Dietician)
Mrs Raji Jayadev, B.Sc (Hons) Dip Nutr & Diet (Syd)

ಎಲೆ, ಅಡಿಕೆ, ಸುಣ್ಣ ಇವು ಜೊತೆಗೂಡಿದಾಗ ತಾಂಬೂಲವೆನಿಸಿಕೊಳ್ಳುತ್ತದೆ. ಊಟವಾದಕೊಡಲೇ ತಾಂಬೂಲ ಹಾಕಿಕೊಳ್ಳುವುದು ಭಾರತೀಯ ಸಂಪ್ರದಾಯ. ಪಾಕಿಸ್ತಾನ, ಬಾಂಗ್ಲಾದೇಶ, ಮೆಯನ್ಮಾರ್, ಕ್ಯಾಂಬೋಡಿಯಾ, ಲಾವೋಸ್, ಥೈಲ್ಯಾಂಡ್, ವಿಯೆಟ್ನಾಂ, ನೇಪಾಳ ಮತ್ತು ಫಿಲಿಪ್ಪೀನ್ಸ್ ಮುಂತಾದ ದೇಶಗಳಲ್ಲೂ ತಾಂಬೂಲ ಮೆಲ್ಲುವ ಪದ್ಧತಿ ಇದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಈ ಪದ್ಧತಿ ಇಲ್ಲ. ಎಲೆ, ಅಡಿಕೆ, ಸುಣ್ಣ, ಕೆಲವೊಮ್ಮೆ ಹೊಗೆಸೊಪ್ಪು ಇವುಗಳನ್ನು ಜೊತೆಗೂಡಿಸಿ ಮೆಲ್ಲುವ ಪದ್ಧತಿ ಎಲ್ಲಿ, ಹೇಗೆ ಶುರುವಾಯಿತು ಮತ್ತು ಇತರ ದೇಶಗಳಿಗೆ ಹೇಗೆ ಹರಡಿತು ಎಂಬುದು ತಿಳಿದಿಲ್ಲ. ಭರತಖಂಡದಲ್ಲಿ ವೇದಕಾಲಕ್ಕೆ ಮುಂಚಿನಿಂದಲೂ ಅಂದರೆ ಹರಪ್ಪನ್ ನಾಗರೀಕತೆಯ ಕಾಲದಲ್ಲಿ ಈ ಪದ್ಧತಿ ಇತ್ತು ಎಂದು ತಿಳಿದುಬಂದಿದೆ. ಪುರಾತನ ವಾಸ್ತುಶಾಸ್ತ್ರ ಸಂಶೋಧನೆಗಳು ಈ ಪದ್ಧತಿ ಸುಮಾರು ನಾಲ್ಕು ಸಾವಿರ ವರ್ಷಗಳ ಹಿಂದಿನಿಂದಲೂ ಥೈಲ್ಯಾಂಡ್, ಇಂಡೋನೇಷ್ಯಾ ಮತ್ತು ಫಿಲಿಪ್ಪೀನ್ಸ್ ದೇಶಗಳಲ್ಲಿ ಇತ್ತು ಎಂದು ಸೂಚಿಸುತ್ತವೆ.

ಕನ್ನಡದ ತಾಂಬೂಲ ಹಿಂದಿಯಲ್ಲಿ ಬೀಡಾ ಅಥವಾ ಪಾನ್ ಎಂದು ದೇಶದಾದ್ಯಂತ ಜನಪ್ರಿಯಗೊಂಡಿದೆ. ಎಲೆ, ಅಡಿಕೆ, ಸುಣ್ಣದೊಂದಿಗೆ ಕಾಚು, ಏಲಕ್ಕಿ, ಲವಂಗ, ಸೊಂಪು, ಜಾಯಿಕಾಯಿ ಕೆಲವೊಮ್ಮೆ ಗುಟ್ಕಾ ಸೇರಿಸಿ ತಯಾರಿಸಿದ ಅನೇಕ ಬಗೆಯ ಬೀಡಾಗಳು ಮಾರುಕಟ್ಟೆಯಲ್ಲಿ ದೊರೆಯುತ್ತವೆ. ಪ್ರಪಂಚದ ಅತ್ಯಂತ ಜನಪ್ರಿಯ ಸೈಕೊಯಾಕ್ಟಿವ್ ಡ್ರಗ್ ಗಳಲ್ಲಿ ನಾಲ್ಕನೆಯ ಸ್ಥಾನ ಪಡೆದಿದೆ. ಕೆಫೀನ್, ತಂಬಾಕು, ಮದ್ಯ ಇತರ ಮೂರು ಸ್ಥಾನದಲ್ಲಿವೆ. ತಾಂಬೂಲ ದೇಹವನ್ನೂ, ಮನಸ್ಸನ್ನೂ ಬಹುಬೇಗ ಉದ್ದೀಪನಗೊಳಿಸುತ್ತದೆ, ಅಮಲೇರಿಸುತ್ತದೆ. ದೈನಂದಿನ ದುಃಖ, ಚಿಂತೆಗಳನ್ನು ಮರೆಸಿ ಮನದಲ್ಲಿ ಕ್ಷೇಮಭಾವ ಮೂಡಿಸುತ್ತದೆ. ಈ ಎಲ್ಲ ಕಾರಣಗಳಿಂದ ಇದು ದುಶ್ಚಟವಾಗಿ ಪರಿಣಮಿಸುತ್ತದೆ. ಎಲೆ ಅಡಿಕೆ ಇಟ್ಟುಕೊಂಡಿರುವುದು ಯುನೈಟೆಡ್ ಅರಬ್ ಎಮಿರೇಟ್ಸ್ ನಲ್ಲಿ ಶಿಕ್ಷಾರ್ಹ ಅಪರಾಧ. ದುಬೈ ಸರ್ಕಾರ ಎಲೆ ಅಡಿಕೆಯ ಆಮದು ಮತ್ತು ಮಾರಾಟವನ್ನು ನಿಷೇಧಿಸಿದೆ.

ವೀಳೆಯದೆಲೆ

ಈ ಸಸ್ಯದ ವೈಜ್ಞಾನಿಕ ಹೆಸರು ಪೈಪರ್ ಬೀಟಲ್. ಬಹು ವಾರ್ಷಿಕ ಸಸ್ಯ , ಪೈಪರೇಸಿ ಕುಟುಂಬಕ್ಕೆ ಸೇರಿದೆ. ಇದರ ತವರು ದಕ್ಷಿಣ ಮತ್ತು ದಕ್ಷಿಣ ಪೂರ್ವ ಏಷ್ಯಾ. ಭಾರತೀಯ ಸಂಸ್ಕೃತಿಯಲ್ಲಿ ಮದುವೆ, ಮುಂಜಿ, ಹಬ್ಬಗಳು ಮುಂತಾದ ಸಾಂಪ್ರದಾಯಿಕ ಆಚರಣೆಗಳಲ್ಲಿ ಎಲೆ, ಅಡಿಕೆಗೆ ಬಹಳ ಪ್ರಾಮುಖ್ಯತೆ ಇದೆ. ಎಲ್ಲಾ ಶುಭ ಕಾರ್ಯ ಗಳಿಗೂ ಎಲೆ, ಅಡಿಕೆ ಬೇಕೇ ಬೇಕು. ವೀಳೆಯದೆಲೆ ಜೀವಕೋಶಗಳಿಗೆ ಉದ್ದೀಪನಕಾರಿ ಘಟಕಗಳನ್ನು ಹೊಂದಿದೆ. ಎಲೆಯಲ್ಲಿರುವ ಎಣ್ಣೆಗೆ ಶಿಲೀಂಧ್ರನಿರೋಧಕ (antifungal) ಮತ್ತು ಸೂಕ್ಷ್ಮಾಣುನಿರೋಧಕ (antimicrobial) ಗುಣಗಳಿವೆ. ಆದ್ದರಿಂದ ಈ ಎಣ್ಣೆಯನ್ನು ಆಹಾರ ಸಂರಕ್ಷಣೆಗೆ (food preservative) ಉಪಯೋಗಿಸುತ್ತಾರೆ. ಎಲೆಯನ್ನು ನಂಜು ನಿರೋಧಕವಾಗಿ (antiseptic) ಮತ್ತು ಬಾಯಿಯ ದುರ್ಗಂಧ ನಿವಾರಣೆಗೆ ಉಪಯೋಗಿಸಬಹುದು ಎಂದು ಸಾಂಪ್ರದಾಯಿಕ ವೈದ್ಯಪದ್ಧತಿಯಲ್ಲಿ ಸೂಚಿಸಲಾಗಿದೆ.

ಸುಣ್ಣ

ಸುಣ್ಣದ ವೈಜ್ಞಾನಿಕ ಹೆಸರು ಕ್ಯಾಲ್ಸಿಯಂ ಹೈಡ್ರಾಕ್ಸೈಡ್. ಇದು ಎಲೆ, ಅಡಿಕೆಯಲ್ಲಿರುವ ಉದ್ದೀಪನಕಾರಿ ಘಟಕಗಳ ಕೆಲಸವನ್ನು ಚುರುಕುಗೊಳಿಸಿ, ಈ ಘಟಕಗಳು ನಾಲಿಗೆಯಡಿಯಿಂದ ನೇರವಾಗಿ ರಕ್ತನಾಳವನ್ನು ಸೇರುವಂತೆ ಮಾಡುತ್ತದೆ.

ಮುಂದಿನ ಪುಟ ನೋಡಿ ...

ಅಡಿಕೆ

ವೈಜ್ಞಾನಿಕ ಹೆಸರು ಅರೇಕಾ ಕಟೇಚು (Areca catechu). ಸಂಸ್ಕೃತದಲ್ಲಿ ಪೂಗಿ ಫಲಂ ಎಂದೂ, ಹಿಂದಿಯಲ್ಲಿ ಸುಪಾರಿ ಎಂದೂ ಕರೆಯುತ್ತಾರೆ. ಇದೊಂದು ವಾಣಿಜ್ಯ ಬೆಳೆ. ಅಡಕೆಯನ್ನು ಉಪಯೋಗಿಸುವುದರಲ್ಲಿ ಇಂಡಿಯಾ ಮೊದಲನೆಯ ಸ್ಥಾನ ಪಡೆದಿದೆ. ಇಂಡಿಯಾ, ಶ್ರೀಲಂಕಾ ಮತ್ತು ದಕ್ಷಿಣ ಚೈನಾದ ಸಾಂಪ್ರದಾಯಿಕ ವೈದ್ಯ ಪದ್ಧತಿಯಲ್ಲಿ ಅಡಿಕೆ ಪುಡಿಯನ್ನು ಹಲ್ಲುಜ್ಜಲು ಮತ್ತು ಹೊಟ್ಟೆ ಹುಳುವಿನ ನಿವಾರಣೆಗೆ ಬಳಸುತ್ತಾರೆ.

ಹಾನಿಕಾರಿಕ ಅಂಶಗಳು

ಅಡಿಕೆಯಲ್ಲಿ ಅರಿಕೈಡಿನ್ ಮತ್ತು ಅರಿಕೋಲಿನ್ ಎಂಬ ಉದ್ದೀಪನಕಾರಿ ಕ್ಷಾರ ಪದಾರ್ಥಗಳಿವೆ. ಈ ರಾಸಾಯನಿಕಗಳು ಅಮಲೇರಿಸುತ್ತವೆ. ಮನೋವಿಕಾರತೆ ಇದ್ದಲ್ಲಿ ಅದನ್ನು ತೀವ್ರಗೊಳಿಸುತ್ತದೆ. ಬಾಯಿಯಲ್ಲಿ ಅತಿ ಹೆಚ್ಚು ಲಾಲರಸ (ಜೊಲ್ಲು) ಸ್ರವಿಸುವಂತೆ ಮಾಡುತ್ತದೆ (ಎಲ್ಲೆಂದರಲ್ಲಿ ರಸ ಉಗುಳುವುದಕ್ಕೆ ಕಾರಣವಾಗುತ್ತದೆ). ಲಾಲರಸದಿಂದ ಜೀರ್ಣಕ್ರಿಯೆ ತ್ವರಿತಗೊಂಡು ರಾಸಾಯನಿಕಗಳು ಬಹು ಬೇಗ ರಕ್ತನಾಳವನ್ನು ಸೇರುತ್ತವೆ. ವೀಳೆಯದೆಲೆಯಲ್ಲಿರುವ ಯುಜಿನಾಲ್ ಮತ್ತು ಅಡಿಕೆಯಲ್ಲಿರುವ ಹಲವಾರು ರಾಸಾಯನಿಕಗಳು ರಕ್ತನಾಳಗಳನ್ನು ಸಂಕುಚಿತಗೊಳಿಸಿ ರಕ್ತದೊತ್ತಡವನ್ನು ಹೆಚ್ಚಿಸುತ್ತದೆ. ರಕ್ತದ ಏರೊತ್ತಡ ಹೃದಯವನ್ನು ಘಾಸಿಗೊಳಿಸುತ್ತದೆ.

ಅಡಿಕೆಯಲ್ಲಿ ಹಲವಾರು ಕ್ಯಾನ್ಸರ್ ಕಾರಕ ಘಟಕಗಳಿವೆ ಎಂಬುದಕ್ಕೆ ಸಾಕಷ್ಟು ವೈಜ್ಞಾನಿಕ ಪುರಾವೆಗಳಿವೆ ಎಂದು "ಇಂಟರ್ ನ್ಯಾಶನಲ್ ಏಜನ್ಸಿ ಫಾರ್ ರಿಸರ್ಚ್ ಆನ್ ಕ್ಯಾನ್ಸರ್" (International Agency for Research on Cancer) ಮತ್ತು "ವರ್ಲ್ಡ್ ಹೆಲ್ತ್ ಆರ್ಗನೈಜೇಶನ್ " (World Health Organisation) ಹೇಳಿಕೆ ನೀಡಿವೆ. ೨೦೦೯ರ ಅಕ್ಟೋಬರ್ ತಿಂಗಳಲ್ಲಿ ೧೦ ದೇಶಗಳ ೩೦ ವಿಜ್ಞಾನಿಗಳು ಕಲೆತು ಅನೇಕಾನೇಕ ವೈಜ್ಞಾನಿಕ ಲೇಖನಗಳನ್ನು ಪರಿಶೀಲಿಸಿ, ತಾಂಬೂಲ ಜಗಿಯುವ ವಾಡಿಕೆ ಕ್ಯಾನ್ಸರ್ ಕಾರಕ, ಬಾಯಿಯಲ್ಲಿ ಮತ್ತು ಅನ್ನನಾಳದಲ್ಲಿ ಕ್ಯಾನ್ಸರ್ ಗಡ್ಡೆಗಳು ಉಂಟಾಗಬಹುದು ಎಂದು ವರದಿ ಮಾಡಿದ್ದಾರೆ. ತಾಂಬೂಲದಲ್ಲಿ ಹೊಗೆಸೊಪ್ಪು ಇದ್ದರೆ ಕ್ಯಾನ್ಸರ್ ನ ಅಪಾಯ ೯.೯ರಷ್ಟು, ಹೊಗೆಸೊಪ್ಪು ಇಲ್ಲದಿದ್ದಲ್ಲಿ ಅಪಾಯ ೮.೪ರಷ್ಟು ಹೆಚ್ಚು ಎಂದು ಒಂದು ಅಧ್ಯಯನ ತಿಳಿಸಿದೆ. ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಹೋಲಿಸಿದರೆ, ಏಷ್ಯಾ ಖಂಡದ ಆಸ್ಪತ್ರೆಗಳಲ್ಲಿ ಬಾಯಿಯ ಕ್ಯಾನ್ಸರ್ ನಿಂದ ನರಳುವ ರೋಗಿಗಳು ಅತಿ ಹೆಚ್ಚು ಎಂದು "ವರ್ಲ್ಡ್ ಹೆಲ್ತ್ ಆರ್ಗನೈಜೇಶನ್ " (World Health Organisation) ೨೦೦೪ರಲ್ಲಿ ವರದಿ ಮಾಡಿದೆ.

ಅನೇಕ ವೈಜ್ಞಾನಿಕ ಅಧ್ಯಯನಗಳಿಂದ ತಿಳಿದುಬಂದಿರುವುದೇನೆಂದರೆ, ಅಡಿಕೆ ಶರೀರದ ಎಲ್ಲಾ ಅವಯವಗಳನ್ನೂ (ಮೆದುಳು, ಹೃದಯ, ಶ್ವಾಸಕೋಶ, ಜೀರ್ಣಾಂಗಗಳು ಇತ್ಯಾದಿ) ಘಾಸಿಗೊಳಿಸಬಹುದು. ಮಧುಮೇಹ, ಉಬ್ಬಸರೋಗ, ಹೃದಯರೋಗ, ಪಿತ್ತಜನಕಾಂಗದ ಖಾಯಿಲೆಗಳನ್ನು ಹದಗೆಡಿಸಬಹುದು. ಪಿತ್ತಜನಕಾಂಗ, ಶ್ವಾಸಕೋಶ ಮತ್ತು ಹೊಟ್ಟೆಯ ಕ್ಯಾನ್ಸರ್ ಬರುವ ಅಪಾಯ ಹೆಚ್ಚಾಗಬಹುದು. ಗರ್ಭಿಣಿಯರು ತಾಂಬೂಲ ಮೆದ್ದಲ್ಲಿ ಮಗುವಿನ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು.
ತಾಂಬೂಲ ಸವಿಯುವುದರಿಂದ ದೇಹವೂ ಮನಸ್ಸೂ ಬಹುಬೇಗ ಉದ್ದೀಪನಗೊಳ್ಳುತ್ತದೆ, ಅಮಲೇರುತ್ತದೆ. ದೈನಂದಿನ ದುಃಖ, ಚಿಂತೆಗಳು ಮರೆತು ಮನದಲ್ಲಿ ಕ್ಷೇಮಭಾವ ಉಂಟಾಗುತ್ತದೆ. ಈ ಎಲ್ಲ ಕಾರಣಗಳಿಂದ ಇದು ದುರ್ವ್ಯಸನವಾಗಿ ಪರಿಣಮಿಸಿ, ಕ್ಯಾನ್ಸರಿನಂತ ಮಾರಕ ರೋಗಗಳಿಗೆ ದಾರಿಮಾಡಿಕೊಡುತ್ತದೆ.

ಊಟದ ಬಳಿಕ ಎಲೆಯ ಜೊತೆ ಏಲಕ್ಕಿ, ಲವಂಗ, ಸೋಂಪು ಅಥವಾ ಓಮು/ಅಜ್ವಾನ (ಅಡಿಕೆಯ ಬದಲು) ಬಳಸಬಹುದು.
ಗಮನಿಸಿ: ಪ್ರಕೃತಿ ಸಹಜವಾದದ್ದೆಲ್ಲವೂ ಆರೋಗ್ಯದಾಯಕವಲ್ಲ. ▪

ಒಂದು ಉಲ್ಲೇಖ: J Oral Pathol Med. 1999 Jan;28(1):1-4.

Oral mucosal lesions associated with betel quid, areca nut and tobacco chewing habits: consensus from a workshop held in Kuala Lumpur, Malaysia, November 25-27, 1996.

Zain RB, Ikeda N, Gupta PC, Warnakulasuriya S, van Wyk CW, Shrestha P, Axéll T.

ವಿಚಾರ ವಿಹಾರ

ಮಾಲು, ಅಡಿಲೈಡ್

ನಿಜ ಭಕ್ತಿ

'ದೇಗುಲಕೆ ಪೆರ್ ಮರಂ ಕಡಿದರ್'

ಇದು ಒಬ್ಬ ಹಳೆಗನ್ನಡದ ಕವಿ ಮಹಾಶಯರ ಸಾಲು.
ಇದರ ಅರ್ಥ?! ದೇವರ ಗುಡಿಗಾಗಿ ಒಂದು ದೊಡ್ಡ ಮರವನ್ನೇ ಕಡಿದರು.

ದೇವರ ದರ್ಶನಕ್ಕೆ ಹೋಗಬೇಕಾದರೆ ಕೆಲವು ಹೂಗಳನ್ನೋ ಅಥವಾ ಒಂದು ಹೂವಿನ ಮಾಲೆಯನ್ನೋ ತೆಗೆದುಕೊಂಡು ಹೋದರೆ ಸಾಕು. ನಮ್ಮ ಭಕ್ತಿಯನ್ನು ತೋರಿಸುವುದಕ್ಕೆ ಹೂವುಗಳಿಂದ ಸಿಂಗಾರಗೊಂಡ ಮರವನ್ನ ಸಂಪೂರ್ಣವಾಗಿ ತರಿದು ದೇವರಿಗೆ ಅರ್ಪಿಸಬೇಕಿಲ್ಲ.

ಇದು ಬರೀ ತೋರ್ಪಡಿಕೆಯ ಆರಾಧನೆ. ಇದು ಸಲ್ಲದು. ದೇವಸ್ಥಾನದಲ್ಲಿ ಇರುವ ದೇವರ ಸುಂದರ ಮೂರ್ತಿಗಳು ಶಿಲ್ಪಾ ಶಾಸ್ತ್ರದ ಪ್ರಕಾರ ಚತುರ ಶಿಲ್ಪಿಗಳಿಂದ ನಿರ್ಮಾಣವಾಗಿರುತ್ತವೆ. ಆ ಸುಂದರ ಮೂರ್ತಿಗಳನ್ನು ಅತಿಯಾದ ಹೂಗಳ ಅಲಂಕಾರದಿಂದ ಮುಚ್ಚಿಬಿಟ್ಟಲ್ಲಿ, ಆ ಶಿಲ್ಪದ ಸೌಂದರ್ಯತೆಯನ್ನು ಭಕ್ತರಾದ ನಮಗೆ ನೋಡುವುದಕ್ಕೆ ಆಗುವುದಿಲ್ಲ.

ಆಡಂಬರದ ಆರಾಧನೆಯ ಅಬ್ಬರದಲ್ಲಿ ನಿಜವಾದ ಆರಾಧನೆ ಮರೆಯಾಗಬಾರದು. ಹಾಗೆಯೇ, ದೇವರ ಪ್ರಸಾದ ದೊಡ್ಡ ಭೋಜನವಾಗಬಾರದು. ಮೇಲೆ ತಿಳಿಸಿದ ಕವಿಯ ಆ ಅಮೂಲ್ಯ ವಾಕ್ಯ ಹಲವಾರು ಸಂಸ್ಥೆಗಳಿಗೂ ಅನ್ವಯಿಸುತ್ತದೆ. ದೇವಸ್ತಾನದ ಟ್ರಸ್ಟ್ ಗಳು ಹಣವನ್ನು ದೇವರ ಹೆಸರಿನಲ್ಲಿ ದುಂದು ವೆಚ್ಚ ಮಾಡಬಾರದು.

ಅವರು ಭರ್ಜರಿ ಊಟದ ವ್ಯವಸ್ಥೆ ಮಾಡುವುದಕ್ಕಿಂತ ಬಡವರಿಗೆ ಅನ್ನ ಸಂತರ್ಪಣೆಯ ಕಾರ್ಯ ಒಳಗೂಡಿಸಿಕೊಳ್ಳಬೇಕು. ಬಡ ವಿಧ್ಯಾರ್ಥಿಗಳಿಗೆ ಪುಸ್ತಕ ಮತ್ತು ಇತರ ಖರ್ಚಿಗೆ ಹಣ ಸಹಾಯ ಮಾಡುವ ಕಾರ್ಯಕ್ರಮವನ್ನು ಹೆಚ್ಚು ಹೆಚ್ಚಾಗಿ ಮಾಡಬೇಕು.

ಶ್ರೀಯುತ್ ಜಿ.ಪಿ. ರಾಜರತ್ನಂ ರವರು ತಮ್ಮ 'ವಿಚಾರ ರಶ್ಮಿಯಲ್ಲಿ' ಹೇಳಿರುವಂತೆ 'ಹೆಚ್ಚು ಹಣ ಖರ್ಚು ಮಾಡಬೇಕಾದರೆ, ಹೆಚ್ಚು ಹಣ ಶೇಖರಿಸಬೇಕು. ಹೆಚ್ಚು ಹಣ ಶೇಖರಿಸಬೇಕಾದರೆ ಹೆಚ್ಚು ಜನರ ಕಡೆಗೆ ಕೈ ಚಾಚಬೇಕು. ಆಗ ನಾವು ತಿರುಪೆ ಬೇಡುವ ಬಿಕ್ಷುಕರಾಗಿಬಿಡುತ್ತೇವೆ'

'ಜನರ ಹತ್ತಿರ ಹೋಗಿ ಹಣವನ್ನು ಬೇಡುವುದಕ್ಕಿಂತ ದೇವರ ಹತ್ತಿರಹೋಗಿ ಆತನ ಅನುಗ್ರಹ ಬೇಡುವುದು ವಾಸಿ. ಜನರ ಹಂಗಿಗೆ ಒಳಗಾಗುವುದಕ್ಕಿಂತ ದೇವರ ಹಂಗಿಗೆ ಒಳಗಾಗುವುದೇ ಮೇಲು'

ದೇವರ ಪೂಜೆಯಲ್ಲಿ ಆರಾಧನೆ ಮುಖ್ಯ, ಆಡಂಬರ ಅವಶ್ಯವಲ್ಲ. ಆರಾಧನೆ ಎಂದರೆ ಮನಸ್ಸಿಗೆ ಉಂಟಾಗುವ ಪ್ರಸನ್ನತೆ. ಎಲ್ಲವೂ ಹಿತ ಮಿತವಾಗಿದ್ದರೆ ಚೆನ್ನ. ಯಾವುದನ್ನು ಮಾಡದೆ ಇರಬೇಕು ಎಂಬ ತಿಳುವಳಿಕೆಯೇ ಧರ್ಮಾಚರಣೆಗೆ ಆಧಾರ.

ಭಕ್ತಿಯ ಮತ್ತು ಪೂಜೆಯ ಹೆಸರಲ್ಲಿ ಪ್ರಕೃತಿಯ ಅಂದವನ್ನು ಕೆಡಿಸುವುದು ಬೇಡ. 'ಪೆರ್ ಮರಂ'ವನ್ನು ನಾವು ತರಿಯುವುದೂ ಬೇಡ.

ಭಕ್ತಿ ನಿಜ ಭಕ್ತಿಯಾಗಿ ಉಳಿಯಲಿ. ವಿವೇಕ ಮತ್ತು ವಿವೇಚನೆ ನಮ್ಮೆಲ್ಲರನ್ನು ಆಳಲಿ. ▪

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"

ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಮಹಾಂತೇಶ್ ಸಿ.
ಇವರ "ಹಂಗ ಸುಮ್ನ್..."

ವೆಸ್ಟೆರ್ನ್ ಆಸ್ಟ್ರೇಲಿಯ ರಾಜ್ಯ ಪುಷ್ಪ – ರೆಡ್ ಅಂಡ್ ಗ್ರೀನ್ ಕಾಂಗರೂ ಪಾ

ಆಸ್ಟ್ರೇಲಿಯಾದ ಹೂವುಗಳು

ಮಾಹಿತಿ ಸಂಗ್ರಹ: ಬದರಿ ತ್ಯಾಮಗೊಂಡ್ಲು

- ಆಸ್ಟ್ರೇಲಿಯಾದ ರಾಜ್ಯವೊಂದಾದ ವೆಸ್ಟೆರ್ನ್ ಆಸ್ಟ್ರೇಲಿಯ ಪುಷ್ಪ ಲಾಂಛನವಾಗಿರುವ ರೆಡ್ ಅಂಡ್ ಗ್ರೀನ್ ಕಾಂಗರೂ ಪಾ ಎನ್ನುವ ಈ ಪುಷ್ಪದ ಸಸ್ಯಶಾಸ್ತ್ರೀಯ ಹೆಸರು "ಯಾನಿಗೋಜನ್ತೋಸ್ ಮಂಗ್ಲೇಸಿ"
- ಹೆಚ್ಚೆಂದರೆ ಮೀಟರ್ ಎತ್ತರಕ್ಕೆ ಬೆಳೆಯುವ ಈ ಸಸ್ಯದ ಕಾಂಡವು ಭೂಮಿಯ ಒಳಗಿದ್ದು, ಹೂವು ಬಿಡುವ ರಂಬೆಗಳು ಒಂದು ಮೀಟರ್ ಎತ್ತರಕ್ಕೆ ಚಾಚುತ್ತವೆ.
- ಕೆಂಪು ಮತ್ತು ಹಸಿರು ಬಣ್ಣದ ಹೂವಿರುವ ಈ ಸಸ್ಯವು ಪ್ರಪಂಚದಲ್ಲೇ ಅತಿ ಅಪರೂಪದ ಪ್ರಬೇಧವೆಂದು ಕರೆಯಲ್ಪಟ್ಟಿದೆ.
- ವೆಸ್ಟೆರ್ನ್ ಆಸ್ಟ್ರೇಲಿಯ ರಾಜ್ಯದ ಪುಷ್ಪ ಲಾಂಛನವಾಗಿ ೧೯೮೦ ರಲ್ಲಿ ಅಂಗೀಕರಿಸಲಾಯಿತು.
- ಪರ್ತ್ ಪ್ರದೇಶದ ಸುತ್ತಮುತ್ತಲಿನ ಮರಳು ಮಿಶ್ರಿತ ನೆಲದಲ್ಲಿ ಹೆಚ್ಚಾಗಿ ಕಾಣಸಿಗುತ್ತದೆ.
- ಈ ಹೂವು ಆಗಸ್ಟ್ ಮತ್ತು ಸೆಪ್ಟೆಂಬರ್ ನಡುವಿನ ಸಮಯದಲ್ಲಿ ಅರಳುತ್ತದೆ ▪

ರೆಡ್ ಅಂಡ್ ಗ್ರೀನ್ ಕಾಂಗರೂ ಪಾ - ಹೂವು

ವೆಸ್ಟೆರ್ನ್ ಆಸ್ಟ್ರೇಲಿಯಾದ ಲಾಂಛನದಲ್ಲಿರುವ ಹೂವು

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದು ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

   ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

   ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

Contact Mr Sudheendra Rao EMAIL
Mobile 0415 291 723

Contact Mr.Sathya Bhat EMAIL
Mobile 0412 918 511

Contact Mr Umesh EMAIL
Mobile 0401 034 456

Contact Mr Eranna Gotyal EMAIL
Mobile 0404 215 605

ತಂದೆಯ ಶ್ರಮ

ಕನಕಾಪುರ ನಾರಾಯಣ

ತಂದೆಯೊಬ್ಬನು ತನ್ನ ಸಂಸಾರ ಸಾಗಿಸಲು ದಿನವಿಡೀ ರೊಟ್ಟಿಯನ್ನು ಮಾರುತ್ತಿದ್ದ. ಸಂಜೆಯ ವೇಳೆ ಉಳಿದ ಸಮಯದಲ್ಲಿ ವೃತ್ತಿ ಶಿಕ್ಷಣವನ್ನೂ ಮಾಡುತ್ತಿದ್ದ. ಮನೆಯ ಮಡದಿ ಮಕ್ಕಳ ಜೊತೆ ಕಾಲ ಕಳೆಯಲು ಸಾಧ್ಯವೇ ಇರುತ್ತಿರಲಿಲ್ಲ. ವರುಷಗಳು ಕಳೆದವು, ಶಿಕ್ಷಣ ಮುಗಿಯಿತು, ಒಳ್ಳೆಯ ಅಂಕಗಳನ್ನು ಪಡೆದು ಉತ್ತೀರ್ಣನೂ ಆದ. ಸರಿ ಅದಕ್ಕೆ ತಕ್ಕ ಪ್ರತಿಫಲದಂತೆ ಒಳ್ಳೆಯ ಕೆಲಸವೂ ದಕ್ಕಿತು. ಕೆಲಸದಲ್ಲಿ ಒಳ್ಳೆಯ ಹೆಸರು, ಹಣ ಸಂಪಾದಿಸತೊಡಗಿದ. ಉತ್ತಮ ಅಧಿಕಾರಿಯಾಗುವ ಸಂಭವ ಇದ್ದುದರಿಂದ ಇನ್ನೂ ಹೆಚ್ಚು ಹೆಚ್ಚು ಓದಲು ಮನಸ್ಸು ಮಾಡಿದ. ಇದರಿಂದ ಮನೆಯವರೊಡನೆ ಕಾಲ ಕಳೆಯುವುದನ್ನೇ ಮರೆತ. ಅಧಿಕಾರಿಯೂ ಆದ, ಕಂಪನಿಯ ಮಾಲೀಕನೂ ಆದ. ದೊಡ್ಡ ಬಂಗಲೆ ಕಾರುಗಳು ಕೈಕಾಲಿಗೆಲ್ಲಾ ಆಳುಗಳು. ಒಮ್ಮೆ ಮನೆಗೆ ಬಂದು ಹೆಂಡತಿ ಮಕ್ಕಳನ್ನು ಕರೆದು ಹೇಳಿದ ಇನ್ನು ದುಡಿದದ್ದು ಸಾಕಾಯ್ತು ಮುಂದೆ ಮನೆಯವರ ಜೊತೆ ನೆಮ್ಮದಿಯಿಂದ ಇರುವೆ ಎಂದ.

ಮಡದಿ ಮಕ್ಕಳಿಗೆ ಹೇಳತೀರದಷ್ಟು ಸಂತೋಷವಾಯಿತು. ಆದಿನ ಆನಂದಿಂದ ಔತಣವನ್ನೇ ಏರ್ಪಡಿಸಿದರು. ನಾಳೆಯಿಂದ ನಮ್ಮವರೆಲ್ಲಾ ಒಟ್ಟಿಗೆ ಇರುವ ಸಂಭ್ರಮದ ಕನಸು ಕಂಡರು,ಕುಡಿದರು,ಕುಣಿದರು, ರಾತ್ರಿ ಕಣ್ತುಂಬ ನಿದ್ರೆ ಮಾಡಿದರು. ಎಲ್ಲರೂ ಬೆಳಿಗ್ಗೆ ಬೇಗನೆ ಎದ್ದು ತಂದೆಯ ಜೊತೆ ಸಂತೋಷದಿ ಕಳೆಯುವ ದಿನಗಳ ನನಸನ್ನು ನಾಂದಿಯಾಡುವ ಭರದಲ್ಲಿ ಇದ್ದರು. ಆದರೆ ತಂದೆ ರಾತ್ರಿ ಮಲಗಿದವನು ಬೆಳಿಗ್ಗೆ ಏಳಲೇ ಇಲ್ಲ. ಹೃದಯ ಅಘಾತದಿಂದ ಯಾವಾಗ ಅವನ ಪ್ರಾಣ ಹಾರಿತ್ತೋ ಯಾರಿಗೂ ತಿಳಿಯದಾಗಿತ್ತು. ನೀತಿ: ಮಡದಿ, ಮಕ್ಕಳ ಜೊತೆ ಕಾಲ ಕಳೆಯುವುದು ಸಂಸಾರಿಯ ಮೊದಲ ಧರ್ಮ ▪

ಸೌತೇಕಾಯಿ ತಿರುಳಿನ ಪಾನಕ

ಬೇಕಾಗುವ ಸಾಮಗ್ರಿಗಳು

- ಸೌತೇಕಾಯಿ ತಿರುಳು ಒಂದು ಲೋಟ
- ತೆಂಗಿನ ಕಾಯಿ ತುರಿ ಅರ್ಧ ಚಮಚ
- ಬೆಲ್ಲ 3-4 ಚಮಚ
- ಏಲಕ್ಕಿ ಪುಡಿ ಚಿಟಿಕೆ

ಮಾಡುವ ವಿಧಾನ

- ಸೌತೇಕಾಯಿ ಸಿಪ್ಪೆ ತೆಗೆದು, ಕಾಯಿತುರಿ, ಬೆಲ್ಲ ಹಾಕಿ ರುಬ್ಬಿಕೊಳ್ಳಿ
- ಕುಡಿಯಲು ಅನುವಾಗುವಷ್ಟು ನೀರು ಬೆರೆಸಿ ಏಲಕ್ಕಿ ಪುಡಿ ಉದುರಿಸಿ ಕದಡಿ ಕುಡಿಯಲು ಕೊಡಿ
- ಬೇಸಿಗೆಯ ಬಿಸಿಲಲ್ಲಿ ದಣಿದು ಬಂದವರಿಗೆ ಇದು ತಂಪೋ.... ತಂಪು.....

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಒಂದರ ಲ್ಲೊಂದು ಒಗಟು

೧. ಮೂರಕ್ಷರದ ಈ ಪದವು ಹಸುವಿನ ಕಂದನ ಮೂಲಕ ದಯೆಯನ್ನು ಹೇಳುತ್ತಿದೆ
೨. ಮೊದಲೆರೆಡಕ್ಷರವು ಗೋ ಸಂತತಿಯು
೩. ಕೊನೆಯೆರಡು ಕೂಡಿದರೆ "ರ" ಕಾರದ ಸಾಲವು
೪. ಮೊದಲಿನ ಅಕ್ಷರಕ್ಕೆ ಕೊನೆಯಕ್ಷರ ಸೇರಿಸಿದರೆ ಸುಗ್ಗಿ ಹಬ್ಬದ ಪೂಜೆ ನಡೆಯುವ ಸ್ಥಳವನ್ನು ಕಾಣುವಿರಿ

ಉತ್ತರಕ್ಕೆ ಪುಟ ೧೧ ನೋಡಿ

ಪ್ರೀತಿಗೆ ಅರ್ಥ ...

ಪ್ರೀತಿಗೆ ಅರ್ಥ ಇಹುದು ಪ್ರಿಯ
ಪ್ರೀತಿಯ ಕರ್ತ ಇಹನು ಪ್ರಿಯ

ನೋವನು ಕೊಟ್ಟ ದೇವನ ಅಡಿಗೆ
ಹೂವನು ಇಟ್ಟರೆ ಪ್ರೀತಿಯದು
ಸಾವದು ಸನಿಹ ಕಾಯುತಲಿದ್ದರು
ಕಾವನ ನೆನೆವುದು ಪ್ರೀತಿಯದು

ತಾಯಿಯು ತನ್ನ ಕೂಸಿನ ಬಾಯಿಗೆ
ಹಾಲನು ಇತ್ತರೆ ಪ್ರೀತಿಯದು
ಹಾಯುವ ಗೋವಿಗೆ ಮೇವನು ಕೊಟ್ಟು
ಕಾಲನು ತೊಳೆದರೆ ಪ್ರೀತಿಯದು

ಹಾರುವ ಹಕ್ಕಿಗೆ ನೀರನು ಇಟ್ಟು
ಕಾಳನು ಕೊಟ್ಟರೆ ಪ್ರೀತಿಯದು
ಊರಲಿ ಅಲೆವ ನೆಲೆ ಇರದವಗೆ
ಕೂಳನು ಇಟ್ಟರೆ ಪ್ರೀತಿಯದು

ಬಾಳನು ತೆತ್ತು ನಾಳೆಯನೀವ
ಬಾಲೆಯ ರೀತಿಯು ಪ್ರೀತಿಯದು
ತಾಳಿಯ ಕಟ್ಟಿ ಕಾಯುತ ಹಟ್ಟಿ
ಮಾಯುತಲಿರುವುದು ಪ್ರೀತಿಯದು

ಬೇವನು ಕೊಟ್ಟರೆ ಮಾವನು ಕೊಟ್ಟು
ಮನವನು ಗೆದ್ದಿಹ ಪ್ರೀತಿಯದು
ಧನವನು ಕೇಳದೆ ಜನರನು ಆಳುವ
ಭಾವವ ಮೆದ್ದಿಹ ಪ್ರೀತಿಯದು

-ಮಾಲು, ಅಡಿಲೈಡ್

ಜಾಣ ಕರ್ನಾಟಕ

೧. ಹದಿನೇಳನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ನಿರ್ಮಿತವಾದ ಈ ಸ್ಮಾರಕವು ಮಾನವನಿರ್ಮಿತ ಅತಿದೊಡ್ಡ ಪ್ರಕಾರಗಳಲ್ಲಿ ಇಟಲಿಯ ಬೆಸಿಲಿಕ ಚರ್ಚ್ ನಂತರದ್ದು. ಯಾವುದದು.

೨. ಇದು ಯಾವುದರ ಸ್ಮಾರಕ ಮತ್ತು ಎಲ್ಲಿದೆ

ಸರಿ ಉತ್ತರಕ್ಕೆ ಪುಟ ೧೫ ನೋಡಿ

ಒಂದರಲ್ಲೊಂದು ಒಗಟು – ಉತ್ತರ

೧. ಕರುಣ ೨. ಕರು ೩. ರು(ಋ)ಣ ೪. ಕಣ

ಹಾಸ್ಯ ಚಿಲುಮೆ

ನ್ಯಾಯಾಧೀಶ: ಈತನಿಗೆ ಎರಡೂ ಕಿವಿಗಳನ್ನು ಕತ್ತರಿಸಿ

ಗುಂಡ: ಅಯ್ಯೋ ಬೇಡಾ ಸ್ವಾಮಿ ನಾನು ಕುರುಡ ಆಗೋಗ್ತೀನಿ

ನ್ಯಾಯಾಧೀಶ: ಮೂರ್ಖ ಕಿವಿ ಕತ್ತರಿಸಿದರೆ ಕುರುಡು ಹೇಗೆ ಆಗ್ತಾರೆ?

ಗುಂಡ:ಆಮೇಲೆ ಕನ್ನಡಕ ಎಲ್ಲಿ ಹಾಕಲಿ?

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ಆಂಗ್ಲರ ಕಾನೂನಿನಲ್ಲಿ ಗಡಸುತನವಿಲ್ಲ
ಎನ್ನುತ್ತಾಳೆ ಈ ಹುಡುಗಿ.

೨.ಅಂದವಾಗಿರುವ ಹುಡುಗಿ ಸದಾ ಬರುವುದಿಲ್ಲ.

೩. ಒಟ್ಟಾಗಿ ಹುಟ್ಟಿದವರಲ್ಲಿ ಎರಡನೆಯವರು
ಮಾಡುವ ಬಟ್ಟೆ ವ್ಯಾಪಾರ?

೪. ವೈಮನಸ್ಯದಿಂದ ಇಬ್ಬರ ನಡುವೆ
ಹೊಗೆಯಾಡಲು ಕಾರಣ?

೫. ದ್ರವ್ಯ ರೂಪದಲ್ಲಿರದ ವಿಷ ಅತಿ ಭಯಂಕರ.

ಉತ್ತರ: ಹಾಲಾಹಲದೊಡನೆಯೇ ಬಂದುದಕ್ಕೆ
ಸುಸಮಯವೇ ಇದು.

ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)
ಜನವರಿ ೩೧ ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಡಿಸೆಂಬರ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಸರಿಯಾಗಿ ಉತ್ತರಿಸಿದವರು

- ಸುಮ ಅಶೋಕ್, ಸಿದ್ದಿ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಬಿ. ಆರ್. ವಿಜಯಲಕ್ಷ್ಮೀ, ಸಿದ್ದಿ
- ಚಿನ್ಮಯೀ, ಮೈಸೂರು
- ಪದ್ಮನಾಭ, ತುಮಕೂರು
- ಅರವಿಂದ್. ಜಿ. ಆರ್, ಉಡುಪಿ

ಡಿಸೆಂಬರ್ ತಿಂಗಳ ಪದಪುಂಜದ ಉತ್ತರ

ಡಿಸೆಂಬರ್ ತಿಂಗಳ ಪದಪುಂಜದಲ್ಲಿ
ಪ್ರಶ್ನೆ ೨ ಮತ್ತು ಉತ್ತರಕ್ಕೆ ಕೊಟ್ಟಿದ್ದ
ಚೌಕಗಳಲ್ಲಿ ಒಂದು ಹೆಚ್ಚಿಗೆಯಿತ್ತು.

ಈ ತಪ್ಪಿಗಾಗಿ ವಿಷಾದಿಸುತ್ತೇವೆ – ಸಂ

೧. ನಾವು ಉಸಿರನ್ನಾಡಲು ಉಳಿಸಿ ಬೆಳೆಸಬೇಕಾದ ಬಣ್ಣ?

ಹ	ಸಿ	ರು

೨. ಪೂಜಾ ಸಾಮಗ್ರಿಗಳು ಹಾಗೂ
ನಾಟಿ ಔಷಧಗಳನ್ನು ಮಾರುವ ಸ್ಥಳ.

ಗ್ರಂ	ಥಿ	ಗ		ಅಂ	ಗ	ಡಿ

೩. ಬೋಧಿ ವೃಕ್ಷದ ಕೆಳಗೆ ಕುಳಿತದಕ್ಕೆ, ಬುದ್ಧನಿಗಾದದ್ದೇನು?

ಜ್ಞಾ	ನೋ	ದ	ಯ

೪. ಕುಳಿತು ಹಾಡಲು ಕೋಗಿಲೆ ಬಯಸುವ
ಹಣ್ಣಿನ ಮರ ಕಿರಿದಾಗಿ ಬಿಟ್ಟಿದೆಯಲ್ಲ!

ಮಾ	ಮ	ರ

5. ಧಾರ್ಮಿಕ ಮಾರ್ಗಗಳ ಬಗ್ಗೆ ಬಾಜಿ ಕಟ್ಟುವಿರೇನು?

ಪಂ	ಥ

೬. ದುರಾದೃಷ್ಟ ಹೆಚ್ಚಾಗಿ ಬೆಂಕಿಗೆ ಬೀಳುವ ಮುನ್ನ ಇದ್ದ ಜಾಗ?

ಬಾ	ಣ	ಲೆ

ಉತ್ತರ: ಚಿತ್ತವನ್ನು ಸೂರೆಗೊಳ್ಳುವ ಪುಸ್ತಕಗಳ ಹಾರ,
ಕನ್ನಡ ಸಾಹಿತ್ಯ ಲೋಕದ ಆಸ್ತಿ.

ಮ	ನೋ	ಹ	ರ		ಗ್ರಂ	ಥ	ಮಾ	ಲೆ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com
ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

NRI SEVA
Educational, Legal, financial, Health, Reality management services Liaison work, Tours & Travels
visit www.nriseva.in or contact
Singapore – Harish +6598691760
Canada – SowmyaKeshava – 00968-99226928
Australia – Nagendra A- 0061401193852
Contact Mr. Nagendra EMAIL 0401193852



ಶ್ರೀಮತಿ ಉಮಾ ರಾಜೇಶ್ ಅವರು ಕಳುಹಿಸಿಕೊಟ್ಟಿರುವ ರಂಗೋಲಿ
ರಂಗೋಲಿ ಪುಡಿ ಮತ್ತು ಬೆಂಕಿಕಡ್ಡಿಯನ್ನು ಬಳಸಿ ಬಿಡಿಸಿದ್ದು

ಅಸಾದುಲ್ಲ ಬೇಗ್ ಅವರ ಶಾಯರಿಗಳು

ಸ್ಫೂರ್ತಿ

ಶಾಯರಿ....
ನಲ್ಲ, ಗಲ್ಲ ಹಿಡಿದೆತ್ತಿ
ಆಡುವ ಮಾತು ;
ಗೊಲ್ಲ - ಕೊಳಲ ನುಡಿಸಿ
ಬರಿಸುವ ಮತ್ತು
ಎಲ್ಲ ಪ್ರೇಮಿಸುವವರಿಗೆ
ಗೊತ್ತು,
ಪ್ರೀತಿಯ ಕಿಮ್ಮತ್ತು

ಪಾಪ ವಿಮರ್ಶಕ
ಅವನಿಗೇನು ಗೊತ್ತು,
ಅವನ ಮಡದಿಯೇ
ಕವಿಯ ಸ್ಫೂರ್ತಿಗೆ ಮುತ್ತು !

ಮಾಣಿಕ್ಯವಲ್ಲ

ನನ್ನ ಶಾಯರಿ
ಮಂಗನ ಕೈ ಮಾಣಿಕ್ಯವಲ್ಲ,
ಹೃದಯ ನುಡಿಸುವ ತುತ್ತೂರಿ,
ಆಲಿಸಿದವನ ಮನ
ಅರಳುತ್ತದೆ,
ಬಾಡುವುದಿಲ್ಲ!

ಬಾಡಿದರೆ.... ಅವ
ವಿಮರ್ಶಕ ... ರಸಿಕನಲ್ಲ.

ಕನ್ನಡದ ಒಂದು ಕಾಯಕಕ್ಕೆ ಕೈ ಜೋಡಿಸಿ

ನೊಂದಾಯಿಸಲು ಮಿಂಚಂಚೆ ವಿಳಾಸ -sugamakannada@gmail.com

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ವಚನ, ಕಗ್ಗ, ಗಮಕ, ಹರಿದಾಸ ಸಾಹಿತ್ಯಗಳು ಕೆಲವು ಪ್ರಮುಖ ಪ್ರಾಕಾರಗಳು. ಇವುಗಳಲ್ಲಿ ಭಗವಂತನ ನಾಮಸ್ಮರಣೆಯಷ್ಟೇ ಅಲ್ಲದೆ, ವಚನಗಳು ತಮ್ಮ ಸರಳ ನುಡಿಯಲ್ಲಿ ಅನುಭವದ ಅರಿವು ನೀಡುವಲ್ಲಿ ನೆರವಾದರೆ, ಹರಿದಾಸ ಸಾಹಿತ್ಯವು ಸಂಗೀತ ಮತ್ತು ಸೊಬಗಿನ ಸಾಹಿತ್ಯದ ಮಿಲನವಾಗಿದೆ. ಕಗ್ಗ, ತ್ರಿಪದಿ,ಷಟ್ಪದಿಗಳು ಅರ್ಥಪೂರ್ಣ ವಿಚಾರಗಳಿಂದ ಕೂಡಿ ಜೀವನದರ್ಶನ ಹಾಗೂ ವಿಚಾರಪೂರ್ಣ ವಿಷಯಗಳಾಗಿ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಜಗತ್ತಿನ ಎಂದಿಗೂ ಝಗಝಗಿಸುವ ಕೊಡುಗೆಗಳಾಗಿವೆ.

ಅಂತರ್ಜಾಲದ ಈ ಮಹಾ ಜಗತ್ತಿನಲ್ಲಿ ಈಗ ಸಾಕಷ್ಟು ಕನ್ನಡಿಗರು ಕರ್ನಾಟಕದಿಂದ ಹೊರಗಿರುವುದು ಎಲ್ಲರಿಗೂ ತಿಳಿದ ವಿಚಾರ. ಅವರೆಲ್ಲರಿಗೂ ಅಲ್ಲದಿದ್ದರೂ ಆಸಕ್ತರಿಗೆ ನೆನೆದಾಗ ಬೆರಳಂಚಿನಲ್ಲೇ ಒಂದೇ ಕಡೆ ಕೈಗೆಟಕುವ ಹಾಗೆ ಮಾಡುವ ನಿಟ್ಟಿನಲ್ಲಿ ನಮ್ಮ ಸುಗಮ ಕನ್ನಡ.ಕಾಂ ಅಂತರ್ಜಾಲ ಕ್ಷೇತ್ರದಲ್ಲಿ ಸುಪ್ರಸಿದ್ಧ ಶರಣರ ವಚನಗಳು, ದಾಸರ ಪದಗಳು, ಕಗ್ಗ, ತ್ರಿಪದಿಗಳು ಹೀಗೆ ಇನ್ನೂ ಅನೇಕ ರಚನೆಗಳನ್ನು ಸಂಗ್ರಹ ಮಾಡುವ ಯೋಜನೆಯನ್ನು ಹಮ್ಮಿಕೊಂಡಿದೆ. ಇದಕ್ಕೆ ತಮ್ಮಗಳ ಸಹಾಯ ಬೇಕಾಗಿದೆ. ತಮಗೆ ಕನ್ನಡ ಬೆರಳಚ್ಚು ಮಾಡಲು ಸಾಧ್ಯವಿದ್ದಲ್ಲಿ, ಈ ಕಲಸ ಆದಂತೇ ಎಂದುಕೊಳ್ಳಿ. ಪ್ರತಿ ವಿಭಾಗದಲ್ಲೂ ಸಾವಿರಕ್ಕೂ ಮೀರುವಂತೆ ಕೃತಿಗಳ ಕಲೆ ಹಾಕುವ ಯೋಚನೆ ಇದೆ. ಈ ಕೆಲಸಕ್ಕೆ ಗರಿಷ್ಟ ಮಿತಿಯಿಲ್ಲದಂತೆ ಹೆಗಲುಕೊಟ್ಟು ನೀವು ಸಹಾಯ ನೀಡಬಹುದು.ನಿಮ್ಮಲ್ಲಿ ಹೆಚ್ಚಿನ ಕನ್ನಡ ಅಭಿಮಾನವಿದ್ದಷ್ಟೂ ಹೆಚ್ಚಿನ ಸಹಾಯ ಸಾಧ್ಯವೆಂಬ ನಂಬಿಕೆ ನಮ್ಮದು. ೩೧ ಆಗಸ್ಟ್ ೨೦೧೫ ರೊಳಗೆ ಈ ಕಾಯಕ ಮುಗಿಸಿ, ಆಸಕ್ತರಿಗೆ ಲಭ್ಯವಾಗಿಸುವ ಆಸೆ ನಮ್ಮದು.

ಸಿಡ್ನಿ ಕನ್ನಡ ಶಾಲೆಯಿಂದ ಈಗಾಗಲೇ ಉತ್ತೀರ್ಣರಾದ ಮಕ್ಕಳೂ, ಸಿಡ್ನಿ ಕನ್ನಡ ಶಾಲೆಯ ಶಿಕ್ಷಕರೂ, ಆಸ್ಟ್ರೇಲಿಯಾದಲ್ಲಿ ಈಗಾಗಲೇ ಕನ್ನಡ ಟೈಪಿಂಗ್ ಮಾಡಲು ಕಲಿತವರೂ,ಪ್ರಪಂಚದ ನಾನಾ ಕಡೆಯಿಂದ ಹೊರನಾಡ ಚೆಲುಮೆಯ ಓದುಗರೂ, ಬರಹಗಾರರೂ ಸಹ ತಮ್ಮ ಕೈ ಜೋಡಿಸಿದ್ದಾರೆ.

ಸಹಾಯ ಹೇಗೆ?

೧.ಮೊದಲು ಆಸಕ್ತರು ಈ-ಮೈಲ್ ಮೂಲಕ ತಮ್ಮ ಹೆಸರು ನೊಂದಾಯಿಸಿಕೊಳ್ಳುವುದು.

೨.ಸುಪ್ರಸಿದ್ಧ ರಚನಕಾರರ ವಚನ, ದಾಸರ ಪದಗಳು, ಕಗ್ಗ, ತ್ರಿಪದಿಗಳು ಇವುಗಳಲ್ಲಿ ಸುಮಾರು ನಾಲ್ಕೈದು ಪುಟಗಳಷ್ಟು ತಮಗೆ ಈ-ಮೈಲ್ ಮೂಲಕ ಕಳುಹಿಸಿಕೊದಲಾಗುವುದು.

೩.ಅದನ್ನು ತಾವು ಬರಹ-ಯೂನಿಕೋಡ್ ಅಥವಾ ಗೂಗಲ್ ಸಹಾಯದಿಂದ ಟೈಪ್ ಮಾಡಿ ನಮಗೆ ಕಳುಹಿಸುವುದು.

೪.ಅವುಗಳನ್ನು ವೆಬ್ ಸೈಟ್ ನಲ್ಲಿ ಪ್ರಕಟಿಸಿದ ನಂತರ ಸಹಾಯ ಮಾಡಿದ ಎಲ್ಲರ ಹೆಸರನ್ನೂ ಶಾಶ್ವತವಾಗಿ ಮುದ್ರಿಸಲಾಗುವುದು. ಅತಿ ಹೆಚ್ಚು ನೆರವು ನೀಡಿದವರಿಗೆ ಕನ್ನಡ ಶಾಲೆಯ ಕಡೆಯಿಂದ ಉಡುಗೊರೆ ಖಚಿತ.

ನೊಂದಾಯಿಸಲು ಮಿಂಚಂಚೆ ವಿಳಾಸ - sugamakannada@gmail.com

ವಿಜ್ಞಾನ

ತೇಲಾಡುವ ಗುಳ್ಳೆಗಳು

ಸಂಕಲನ: ಬದರಿ ತ್ಯಾಮಗೊಂಡ್ಲು

ಬೇಕಾಗುವ ಸಾಮಗ್ರಿ:

- ಬೇಕಿಂಗ್ ಸೋಡಾ – ಕಾಲು ಕಪ್
- ವಿನೆಗರ್ – ಮುಕ್ಕಾಲು ಕಪ್
- ಗುಳ್ಳೆ ಮಾಡುವ ದ್ರಾವಣ (Bubble Solution)
- ಗುಳ್ಳೆ ಊದುವ ಸಾಧನ (Bubble Wand)
- ಒಂದು ದೊಡ್ಡ ಬೌಲ್

ವಿಧಾನ:

- ಬೇಕಿಂಗ್ ಸೋಡವನ್ನು ಬೌಲ್ ಒಳಕ್ಕೆ ಹಾಕಿ ನಂತರ ಗುಳ್ಳೆಗಳೇಳುವ ತನಕ ನಿಧಾನವಾಗಿ ವಿನೆಗರ್ ಸುರಿಯಿರಿ
- ಈಗ ಗುಳ್ಳೆ ಊದುವ ಸಾಧನದಿಂದ ಬೌಲ್ ಒಳಕ್ಕೆ ಗುಳ್ಳೆಗಳನ್ನು ಊದಿರಿ
- ಎಲ್ಲವೂ ಸರಿಯಾಗಿ ಮಾಡಿದ್ದರೆ, ಗುಳ್ಳೆಗಳು ಬೌಲ್ ನಲ್ಲಿರುವ ದ್ರಾವಣದ ಮೇಲೆ ಬೀಳದೆ ಒಂದಷ್ಟು ಹೊತ್ತು ತೇಲಾಡುತ್ತವೆ

ಏನಾಗುತ್ತಿದೆ:

ಬೇಕಿಂಗ್ ಸೋಡಾ ಮತ್ತು ವಿನೆಗರ್ ಮಿಶ್ರಣವು ಆಸಿಡ್ ಮತ್ತು ಬೇಸ್ ನ ಮಿಶ್ರಣವಾಗುತ್ತದೆ. ಇದು ಇಂಗಾಲದಡೈಆಕ್ಸೈಡನ್ನು (carbon dioxide) ಉತ್ಪತ್ತಿ ಮಾಡುತ್ತದೆ. ಇದು ಸ್ವಲ್ಪ ಭಾರವಾದ ಅನಿಲವಾಗಿದ್ದು ವಾತಾವರಣದಲ್ಲಿ ಮೇಲೆ ಹೋಗದೆ, ಬಬಲ್ ದ್ರಾವಣದ ಮೇಲೆ ಕುಳಿತುಕೊಳ್ಳುತ್ತದೆ. ಈ ಅನಿಲವು ಕಾಣಿಸದಾದ್ದರಿಂದ, ಗುಳ್ಳೆಗಳು ಈ ಅನಿಲದ ಮೇಲೆ ಕುಳಿತಿದ್ದರೂ ನಮಗೆ ಬಬಲ್ ದ್ರಾವಣಕ್ಕಿಂತ ಎತ್ತರದಲ್ಲಿ ತೇಲಾಡುತ್ತಿದೆಯೇನೋ ಎನ್ನುವಂತೆ ತೋರುತ್ತದೆ.▪

ಜಾಣ ಕರ್ನಾಟಕ – ಉತ್ತರ

೧. ಗೋಲ ಗುಮ್ಮಟ ೨. ಇದು ಮಹಮದ್ ಆದಿಲ್ ಷಾ ನ ಗೋರಿ. ಬಿಜಾಪುರದಲ್ಲಿದೆ. ಇದರ ಉದ್ದ ಮತ್ತು ಅಗಲ ೫೦ ಮೀ , ಹೊರಗಡೆ ಎತ್ತರ ೧೯೮ ಅಡಿ ಮತ್ತು ಒಳಗಡೆ ಎತ್ತರ ೧೭೫ ಅಡಿ ಇದ್ದು ಮೇಲಿನ ಗೋಲಾಕಾರದ ಗುಂಬಜ್ ೩೯ ಮೀ (೧೨೪ ಅಡಿ) ವ್ಯಾಸ ಹೊಂದಿದೆ

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಗಾಳಿಪಟ ಮೇಳ

ಜನವರಿ 16, 2016 ಬೆಳಿಗ್ಗೆ 10:00 ಕ್ಕೆ

Rosehill Gardens James Ruse Drive, Rosehill, New South Wales, Australia

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

info@sydneykitefestival.com.au, www.sydneykitefestival.com.au

ಕ್ಯಾನ್ಬರ ಬಣ್ಣದ ಮೇಳ

ಫೆಬ್ರವರಿ 6, 2016 ಬೆಳಿಗ್ಗೆ 11:00 ಕ್ಕೆ

Commonwealth Park, Parkes ACT

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

http://www.slseindia.com.au/events/colourfest-in-canberra-on-6th-february-2016/

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ – ಮುಖ ಪುಟದಲ್ಲಿನ ಚಿತ್ರ ಕೃಪೆ – ನಾಗಶ್ರೀ ಹರ್ಷ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.

ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.